ವಿ-330—(26)

<u>ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ ಇವರು ನಿಯಮ–330ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ ಸಲ್ಲಿಸುವ ಬಗ್ಗೆ</u>

ವಿಕಲಚೇತನರ ಸಬಲೀಕರಣ ಇಲಾಖೆಯು ಅನುದಾನ ಸಂಹಿತೆ 1982 ರಡಿ ಮಾರ್ಗಸೂಚಿಗಳನ್ನು ರೂಪಿಸಿ, ಸ್ವಯಂ ಸೇವಾ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡುತ್ತಿದ್ದು, ಸದರಿ ಅನುದಾನ ಸಂಹಿತೆಯ ವಿರುದ್ಧವಾಗಿ ಸರ್ಕಾರವು ಅಂಧರ ಕೈಗಾರಿಕಾ ತರಬೇತಿ; ತಾಂತ್ರಿಕ ತರಬೇತಿ ಕೇಂದ್ರ, ಚಲನವಲನ ತರಬೇತಿ ಕೇಂದ್ರ ಇವುಗಳಿಗೆ ನಿಯಮ ಬಾಹಿರವಾಗಿ ಅನುದಾನ ಬಿಡುಗಡೆ ಮಾಡುತ್ತಿದ್ದು, ಸದರಿ ಕೈಗಾರಿಕಾ ತರಬೇತಿ ಸಂಸ್ಥೆಗಳು ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದರೂ ಸಹ ಕೋಟ್ಯಾಂತರ ರೂಪಾಯಿಗಳ ವಿಕಲಚೇತನರ ಅನುದಾನವನ್ನು ಬಿಡುಗಡೆ ಮಾಡುತ್ತಿದ್ದು ಈ ಬಗ್ಗೆ ಸರ್ಕಾರಕ್ಕೆ ಸಂಘ ಸಂಸ್ಥೆಗಳು ನಿರಂತರವಾಗಿ ಮನವಿ ನೀಡುತ್ತಿದ್ದರೂ ಸಹ, ಈವರೆಗೂ ಸರ್ಕಾರದಿಂದ ಕ್ರಮ ಕೈಗೊಂಡಿರುವುದಿಲ್ಲ.

ಈ ಬಗ್ಗೆ ಕೋಟ್ಯಾಂತರ ರೂಪಾಯಿಗಳ ಅನುದಾನ ದುರ್ಬಳಕೆ ಮಾಡಿಕೊಂಡಿರುವವರ ವಿರುದ್ಧ ಸರ್ಕಾರವು ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ (ಮಾನ್ಯ ಮುಖ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ). ಸದನದಲ್ಲಿ ಪ್ರಸ್ತಾಪಿಸಬಯಸುತ್ತೇನೆ.

<u>ಉತ್ತರ</u>

1982ರ ರಾಜ್ಯ ಅನುದಾನ ಸಂಹಿತೆಯು ಅಂಗವಿಕಲರ ಶೈಕ್ಷಣಿಕ ಉದ್ದೇಶದಿಂದ ರೂಪಿಸಲ್ಪಟ್ಟಿದ್ದು, ಈ ನಿಯಮದ ಅನುಸಾರ ಸಂಸ್ಥೆಗಳು ಅಂಗವಿಕಲ ಮಕ್ಕಳ ಶಿಕ್ಷಣ, ತರಬೇತಿ ಹಾಗೂ ಶೈಕ್ಷಣಿಕ ಪುನರ್ವಸತಿ ಒದಗಿಸುತ್ತಿದ್ದಲ್ಲಿ ಸದರಿ ಸಂಸ್ಥೆಗಳನ್ನು ಅನುದಾನ ಸಂಹಿತೆಯಡಿ ಒಳಪಡಿಸಿ ಸದರಿ ಸಂಸ್ಥೆಗಳಿಗೆ ನಿಯಮಾನುಸಾರ ಅನುದಾನ ನೀಡಲು ಅವಕಾಶವಿರುತ್ತದೆ. ಈ ಹಿನ್ನೆಲೆಯಲ್ಲಿ ಅನುದಾನ ಸಂಹಿತೆಯಡಿ ವಿಶೇಷ ಶಾಲೆಗಳನ್ನು ಒಳಗೊಂಡಂತೆ ತರಬೇತಿ ಕೇಂದ್ರ ಮತ್ತು ಪುನರ್ವಸತಿ ಕೇಂದ್ರಗಳನ್ನು ಅಂಗವಿಕಲ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ನಡೆಸಲು ಅವಕಾಶ ಕಲ್ಪಿಸಲಾಗಿದೆ. ಅನುದಾನ ಸಂಹಿತೆಯು 11.8.1982ರಿಂದ ವಿಕಲಚೇತನ ಮಕ್ಕಳ ಶಿಕ್ಷಣಕ್ಕಾಗಿ ರಾಜ್ಯದಲ್ಲಿ ಜಾರಿಗೊಳಿಸಲಾಗಿದೆ. 1982ರ ರಾಜ್ಯ ಅನುದಾನ ಸಂಹಿತೆಯ ಮುಖ್ಯ ಉದ್ದೇಶ ಅಂಗವಿಕಲರಿಗೆ ಶಿಕ್ಷಣ, ಪುನರ್ವಸತಿ ನೀಡುವಂತಹ ಸಂಸ್ಥೆಗಳ ನಿರ್ವಹಣೆ ಮಾಡುವುದಾಗಿದೆ. ಆದ್ದರಿಂದ ರಾಜ್ಯದಲ್ಲಿ ಅನುದಾನ ಸಂಹಿತೆಯಡಿ ವಿಶೇಷ ಶಾಲೆಗಳು, ಕೈಗಾರಿಕಾ ತರಬೇತಿ ಕೇಂದ್ರ ಹಾಗೂ ಪುನರ್ವಸತಿ ಕೇಂದ್ರಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ನಿರ್ವಹಿಸಲಾಗುತ್ತಿದೆ.

ರಾಜ್ಯದಲ್ಲಿ ಪ್ರಸ್ತುತ ರಾಜ್ಯ ಅನುದಾನ ಸಂಹಿತೆಯಡಿ ಒಟ್ಟು 34 ಸ್ವಯಂ ಸೇವಾ ಸಂಸ್ಥೆಗಳು ವಿಶೇಷ ಶಾಲೆಗಳು, ತರಬೇತಿ ಕೇಂದ್ರಗಳು ಹಾಗೂ ಪುನರ್ವಸತಿ ಕೇಂದ್ರಗಳನ್ನು ಜಿಲ್ಲಾ ಪಂಚಾಯತ್ ಅನುದಾನದಡಿ ನಡೆಸುತ್ತಿವೆ. ಇವುಗಳಲ್ಲಿ 29 ವಿಶೇಷ ಶಾಲೆಗಳಿದ್ದು, 05 ತರಬೇತಿ ಕೇಂದ್ರಗಳನ್ನು ಅಂಗವಿಕಲರಿಗಾಗಿ ನಿರ್ವಹಿಸಲಾಗುತ್ತಿದೆ. ಪ್ರತಿ ವರ್ಷವೂ ಈ ಸ್ವಯಂ ಸೇವಾ ಸಂಸ್ಥೆಗಳಿಗೆ ಶೇ.100

ರಷ್ಟು ಸಿಬ್ಬಂದಿಗಳ ವೇತನವನ್ನು ಹಾಗೂ ನಿರ್ವಹಣೆಗಾಗಿ ಶೇ.50 ರಷ್ಟು ಅನುದಾನವನ್ನು ಸರ್ಕಾರದಿಂದ ನೀಡಲಾಗುತ್ತಿದೆ.

1982 ರಾಜ್ಯ ಅನುದಾನ ಸಂಹಿತೆಯಡಿ ಬೆಂಗಳೂರಿನಲ್ಲಿ ನ್ಯಾಷನಲ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್ ಸ್ವಯಂ ಸೇವಾ ಸಂಸ್ಥೆಯ ಮುಖಾಂತರ ಅಂಧರಿಗಾಗಿ ಚಲನವಲನ ತರಬೇತಿ ಕೇಂದ್ರ ಹಾಗೂ ತಾಂತ್ರಿಕ ತರಬೇತಿ ಕೇಂದ್ರಗಳನ್ನು ಹಾಗೂ ಅಸೋಸಿಯೇಷನ್ ಫಾರ್ ದಿ ಪೀಪಲ್ ವಿತ್ ಡಿಸೇಬಿಲಿಟಿ ಸಂಸ್ಥೆಯ ಮುಖಾಂತರ ವಿಕಲಚೇತನರಿಗಾಗಿ ಕೈಗಾರಿಕಾ ತರಬೇತಿ ಕೇಂದ್ರವನ್ನು ನಡೆಸಲಾಗುತ್ತಿದೆ. ಮೈಸೂರಿನಲ್ಲಿ ನ್ಯಾಷನಲ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್ ಸಂಸ್ಥೆಯ ಮುಖಾಂತರ ಅಂಧರ ಮತ್ತು ಕಿವುಡು ಮಕ್ಕಳ ಕೈಗಾರಿಕಾ ತರಬೇತಿ ಕೇಂದ್ರವನ್ನು ಹಾಗೂ ಮಂಗಳೂರಿನಲ್ಲಿ ಗಿಲ್ಡ್‌ಆಫ್ ಸರ್ವಿಸ್ ಸಂಸ್ಥೆಯ ಮುಖಾಂತರ ಶ್ರವಣದೋಷವುಳ್ಳ ಮಕ್ಕಳಿಗಾಗಿ ಪುನರ್ವಸತಿ ಕೇಂದ್ರವನ್ನು ನಡೆಸಲಾಗುತ್ತಿದೆ.

1982ರ ರಾಜ್ಯ ಅನುದಾನ ಸಂಹಿತೆಯಡಿ ಅಂಗವಿಕಲರ ಸಂಸ್ಥೆಗಳಿಗೆ ಅನುದಾನವನ್ನು ನೀಡುವ ಬಗ್ಗೆ ಸರ್ಕಾರವು ಹೊರಡಿಸುವ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್/18/ಪಿಹೆಚ್‌ಪಿ/82 ಬೆಂಗಳೂರು ದಿನಾಂಕ:11.08.1982 ಹಾಗೂ ಸುತ್ತೋಲೆ ಸಂಖ್ಯೆ:ಡಿ.ಡಬ್ಲ್ಯೂಸಿ/ಪಿ.ಹೆಚ್.ಎಸ್-1/ಪಿಹೆಚ್‌ಐ-ಜಿಐಎ/82-83 ದಿನಾಂಕ:4.12.1982ರಲ್ಲಿ ತಿಳಿಸಲಾಗಿದೆ. (ಪ್ರತಿ ಲಗತ್ತಿಸಿದೆ.)

In the case of training Institutions, Rehabilitation Centres and other Institution for the disabled, assessment of grant may be based on the merit of the individual institutions subject to the general Grant-in-aid institution of 100% teaching staff and 50% maintenance allowance

The expenditure on this shall be met from Head of account 288-social security and welfare D2-B-III-Education, Training and Rehabilitation programme for the physically and mentally Handicapped.

ಮೇಲಿನ ಆದೇಶಗಳಲ್ಲಿ ತಿಳಿಸಿರುವಂತೆ ವಿಶೇಷ ಶಾಲೆ / ತರಬೇತಿ ಕೇಂದ್ರಗಳ ಶಿಕ್ಷಕರಿಗೆ ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಶೇ.100 ರಷ್ಟು ವೇತನ ಹಾಗೂ ಶೇ.50 ರಷ್ಟು ನಿರ್ವಹಣಾ ವೆಚ್ಚ ಅನುದಾನವನ್ನು ನೀಡಲು ಅವಕಾಶವಿದ್ದು, ಅದರಂತೆ ತರಬೇತಿ ಕೇಂದ್ರಗಳಿಗೆ ಅನುದಾನವನ್ನು ನೀಡಲಾಗುತ್ತಿದೆ.

ಅಂಗವಿಕಲರಿಗಾಗಿ ನಡೆಸಲಾಗುತ್ತಿರುವ ಕೈಗಾರಿಕಾ ತರಬೇತಿ ಕೇಂದ್ರಗಳು ಪಠ್ಯವಸ್ತು, ಪರೀಕ್ಷೆ, ತರಬೇತಿ ಅವಧಿ ಮುಂತಾದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಉದ್ಯೋಗ ಮತ್ತು ತರಬೇತಿ ಇಲಾಖೆಯ ನಿಯಮಗಳಂತೆ ನಿರ್ವಹಿಸಲಾಗುತ್ತದೆ. ಈ ತರಬೇತಿ ಕೇಂದ್ರಗಳಲ್ಲಿ ವಿಶೇಷ ಪರಿಣಿತಿ ಹೊಂದಿರುವಂತಹ ಶಿಕ್ಷಕರಿಂದ ಬೋಧನೆಯನ್ನು ನಿರ್ವಹಿಸಲಾಗುತ್ತಿದೆ. ತರಬೇತಿ ಹೊಂದಿದಂತಹ ವಿಕಲಚೇತನರು ಹಲವಾರು ಉದ್ಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಮುಂದುವರೆದು ಚಲನವಲನ ತರಬೇತಿ ಪಡೆದಂತಹ ಅಂಧ ವ್ಯಕ್ತಿಗಳು ಸ್ವಾವಲಂಬಿಗಳಾಗಿ ಜೀವನವನ್ನು ನಿರ್ವಹಿಸುತ್ತಿದ್ದಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ವಿಕಲಚೇತನರ ಶಿಕ್ಷಣಕ್ಕಾಗಿ ಅನುದಾನವನ್ನು ನಿಯಮಾನುಸಾರ ಒದಗಿಸಲಾಗುತ್ತಿದೆ ಹಾಗೂ ಅಂಗವಿಕಲರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳೇ ಈ ತರಬೇತಿ ಕೇಂದ್ರಗಳನ್ನು ನಿರ್ವಹಿಸುತ್ತಿದ್ದು, ಅಂಗವಿಕಲರ ಸಬಲೀಕರಣಕ್ಕಾಗಿಯೇ ಸ್ಥಾಪಿಸಲ್ಪಟ್ಟ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಡಿ ಜಾರಿಗೊಳಿಸಿದಂತಹ 1982ರ ರಾಜ್ಯ ಅನುದಾನ ಸಂಹಿತೆಯ ನಿಯಮಾನುಸಾರ ಅನುದಾನವನ್ನು ಅಂಗವಿಕಲರ ಶೈಕ್ಷಣಿಕ ಅಭಿವೃದ್ಧಿಗಾಗಿಯೇ ಜಿಲ್ಲಾ ಪಂಚಾಯತ್ ಮೂಲಕ ಬಿಡುಗಡೆ ಮಾಡಲಾಗುತ್ತಿದ್ದು, ಇದರಲ್ಲಿ ಯಾವುದೇ ವಿಕಲಚೇತನರ ಅನುದಾನದ ದುರ್ಬಳಕೆ ಆಗಿರುವುದಿಲ್ಲ.

ಈವರೆವಿಗೂ ವಿಕಲಚೇತನರ ಕೋಟ್ಯಾಂತರ ಅನುದಾನದ ದುರ್ಬಳಕೆಯ ಬಗ್ಗೆ ಕ್ರಮಕೈಗೊಳ್ಳುವಂತೆ ಸರ್ಕಾರಕ್ಕೆ ಯಾವುದೇ ಸಂಘ ಸಂಸ್ಥೆಗಳಿಂದ ಮನವಿ ಸ್ವೀಕೃತವಾಗಿರುವುದು ಗಮನಕ್ಕೆ ಬಂದಿರುವುದಿಲ್ಲ.

ಸಂಖ್ಯೆ: ಮಮಇ 275 ಪಿಹೆಚ್‌ಪಿ 2021

Halappa sd

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ ಹಾಗೂ ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಸಚಿವರು.